PAPERS LAID ON THE TABLE

Notifications under the Bombay Village Panchayets Act.

Sri R. CHENNIGARAMIAH (Minister for Local Self-Government).—Sir, I lay on the Table the Notifications No. P.C.H.S.R. dated 24th November 1956 and No. P.C.H.S.R. II-165 dated 6th December 1956 issued under clause (b) of sub-section (1) of section 108 of the Bombay Village Panchayats Act, 1933, read with Government Circular Local Self-Government and Public Health Department No. 2565-33, dated 20th May 1950.

Delimitation of Constituencies Order, 1956.

Sri R. CHENNIGARAMIAH (Minister for Local Self-Government).—Sir, as required by sub-section (3) of section 47 of the States Reorganisation Act, I lay on the Table of the House the Delimitation of Parliamentary and Assembly Constituencies Order, 1956 with respect to Mysore State.

Sri J. MOHAMED IMAM (Jagalur).—On a point of information, Sir. When a statement or a Government Order is laid on the Table of this House, I think this House has got power to table a motion and discuss that.

Mr. SPEAKER.—No; because the Delimitation Commission is the supreme body, we cannot discuss its order.

Sri J. MOHAMED IMAM.—Will copies be supplied ?

Mr. SPEAKER.—Yes, they will be supplied.

NON-OFFICIAL BILL

Bombay Tenancy and Agricultural Land (Amendment) Bill, 1956.

Sri A. S. KAMBLI (Hubli).—Sir, I beg leave to introduce the Bombay Tenancy and Agricultural Lands (Amendment) Bill, 1956.

For the reasons stated in the Statement of Objects and Reasons: I beg leave of the House to introduce the Bill.

Mr. SPEAKER.—Motion moved:

"That leave be granted to introduce the Bombay Tenancy and Agricultural Lands (Amendment) Bill, 1956."

Sri B. S. KUSHALAPPA (Mercara Town).—Members have not been supplied with copies of the Bill.

Mr. SPEAKER.—The point is, we are still at the stage of granting or not granting leave for the introduction of the Bill. After leave is granted, copies will be supplied. I will put the motion to the vote of the House.

The question is:

"That leave be granted to introduce the Bombay Tanancy and Agricultural Lands (Amendment) Bill, 1956."

The House was divided.

For: Eleven members

Against ... Nil

The motion was adopted.

Mr. SPEAKER.—I must say that there is some confusion. I do not know the procedure that used to be followed in the former Mysore Assembly. In other Assemblies, whatever the nature of the Bill, at the leave stage it is not opposed. When it comes for consideration, it is after consideration, either opposed, withdrawn, negatived, or put to vote and carried. Anyhow, the Bill has survived.

NON-OFFICIAL RESOLUTIONS.

No. 1—Pay Scales of N. G. Os.

*ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ನಾನು ಈ ಕೆಳಗಿನ ನಿರ್ಣಯವನ್ನು ಈ ಮಾನ್ಯ ಸಭೆಯಲ್ಲಿ ಮಂಡಿಸುತ್ತೇನೆ. ನನ್ನ ನಿರ್ಣಯ ಈ ರೀತಿಯಾಗಿದೆ:

"ಹೊಸ ಮೈಸೂರು ರಾಜ್ಯದಲ್ಲಿನ ನಾನ್-ಗೆಜೆಟೆಡ್ ಆಫೀಸರುಗಳ ಸಂಬಳಗಳ ಸ್ಕೇಲುಗಳನ್ನು ಒಂದೇ ಸಮನಾಗಿರುವಂತೆ ಮಾಡಲು ಜಾಗ್ರತೆಯಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

Mr. SPEAKER.—Motion moved:

"That this Assembly is of the opinion that early steps be taken to bring into uniformity the salary scales of the non-gazetted officers in the new Mysore State."

There is an amendment in the name of Sri Pujar. I have no objection to the moving of that amendment but I feel that it is not necessary because sections 115 and 116 of the States Reorganisation Act give such guarantee. If the Hon'ble Member wants to move it, I have no objection.

Sri N. B. PUJAR (Ron).—Sir I beg to move:

'After the words "New Mysore State" insert the words "regard being had to the principle that the present scales of pay shall not be varied to the disadvantage of the recipients thereof."'

Mr. SPEAKER.—Amendment moved?

'After the words "New Mysore State" insert tho words "regard being had to the principle that the present scales of pay shall not be varied to the disadvantage of the recipients thereof."'

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಈ ನಿರ್ಣಯಗಳೆಲ್ಲ ಬ್ಯಾಲೆಟ್ ಆರ್‌ಡರ್ (Ballot-order) ನಲ್ಲಿರುವುದರಿಂದ, ಒಂದೇ ವಿಷಯವಾಗಿದ್ದರೂ ಕೂಡ ಅವೆಲ್ಲವುಗಳನ್ನೂ ಒಟ್ಟಿಗೇ ತೆಗೆದುಕೊಳ್ಳುವುದು ವಿಹಿತವಲ್ಲವೇ ?

ಅಧ್ಯಕ್ಷರು.—ಒಮ್ಮೆ ಒಂದೇ ಪ್ರಕಾರದ ಗೊತ್ತುವಳಿ ಇದ್ದರೆ ಒಂದು ಮಂಡಿತವಾದರೆ ಎರಡನೆಯದನ್ನು ಮಂಡಿಸಬೇಕಾಗಿಲ್ಲ. ಅದರಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೆ ಆ ಮೇಲೆ ಅದನ್ನೂ ಮಂಡಿಸಬಹುದು.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಈ ನಿರ್ಣಯ ಮೊಟ್ಟಮೊದಲನೆಯ ಸ್ಥಾನವನ್ನು ಪಡೆದಿರತಕ್ಕಂಥಾದ್ದು ಈ ಸಭೆಗೆ ಬಹಳ ಅಭಿನಂದನೀಯವಾದ ಸಂಗತಿ. ಈ ಸರ್ಕಾರದ ನೌಕರರ ಸಂಬಳ ಸಾರಿಗೆಗಳ ಸಮಸ್ಯೆ ಬಹಳ ದೊಡ್ಡದು. ಬಹಳ ದೊಡ್ಡದು ಮಾತ್ರವೇ ಅಲ್ಲದೆ ಬಹಳ ಕಾಲದಿಂದಲೂ ನಮ್ಮ ಸರ್ಕಾರದ ಮುಂದೆಯೂ ಶಾಸನಸಭೆಗಳ ಮುಂದೆಯೂ, ಇತರ ವೇದಿಕೆಗಳ ಮುಂದೆಯೂ ಚರ್ಚೆಯಾಗುತ್ತ ಬಂದಿದೆ. ನಮ್ಮ ದೇಶದಲ್ಲಿ ಈಗ ಜಾರಿಯಲ್ಲಿರತಕ್ಕಂಥ ಸರ್ಕಾರದ ಯಂತ್ರದ ಪದ್ಧತಿಯಲ್ಲಿ ಸಂಬಳಸಾರಿಗೆಗಳು ನ್ಯಾಯವಾದ ಮತ್ತು ಸಮರ್ಪಕವಾದ ರೀತಿಯಲ್ಲಿಲ್ಲದೆ ಜನರಿಗೆ ಬಹಳ ಅಸಮಾನತೆಯನ್ನುಂಟುಮಾಡಿದೆ. ಒಂದು ಕಡೆ ಭಾರಿ ಸಂಬಳಗಳನ್ನು ತೆಗೆದುಕೊಳ್ಳತಕ್ಕ ಅಧಿಕಾರಿಗಳು ಮತ್ತೊಂದು ಕಡೆ ಎರಡು ಹೊತ್ತಿನ ಊಟಕ್ಕೂ ಕೂಡ ಸಾಲದಷ್ಟು ಅತ್ಯಂತ ಕಡಮೆಯ ಸಂಬಳವನ್ನು ಪಡೆಯತಕ್ಕಂಥ ನೌಕರರು—ಈ ಅಸಮಾನತೆ ಬಹಳ ಅಸಂತುಷ್ಟಿಗೆ ಕಾರಣವಾಗಿದೆ. ಸ್ವಾಮಿ, ನಮ್ಮ ದೇಶದಲ್ಲಿ ಬಡವರನ್ನು ಮೇಲಕ್ಕೆ ತರಲು, ಕಷ್ಟ ಸ್ಥಿತಿಯಲ್ಲಿರತಕ್ಕಂಥ, ದಾರಿದ್ರ್ಯ ಸ್ಥಿತಿಯಲ್ಲಿರತಕ್ಕಂಥ ಜನರನ್ನು ಉತ್ತಮಪಡಿಸಲು ಪ್ರಯತ್ನಗಳು ನಡೆಯುತ್ತಲೇ ಬಂದಿವೆ. ಈ ಕೆಳದರ್ಜೆ ನೌಕರರು ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ. ದಾರಿದ್ರ್ಯ ಸ್ಥಿತಿಯಲ್ಲಿದ್ದಾರೆ ಪ್ರಪಂಚದ ಈ ವೇಗದ ಓಟದಲ್ಲಿ ಧಾರಣೆವಾಸಿಗಳು ಮತ್ತು ಜೀವನದ ಬೆಲೆ, ಎಂದರೆ Cost of living index ಕೂಡ ಏರುತ್ತ ಬಂದಿದೆ. ಅನೇಕ ವರ್ಷಗಳ ಹಿಂದೆ ಸುಮಾರು ಐದು ರೂಪಾಯಿ ಸಂಬಳ ಪಡೆದರೆ ಅದರಲ್ಲಿ ಎಷ್ಟುಮಟ್ಟಿಗೆ ಬಡನೌಕರನು ಜೀವನವನ್ನು ನಿರ್ವಹಿಸಲಿಕ್ಕೆ ಸಾಧ್ಯವಾಗುತ್ತಿತ್ತೋ ಈಗ ಅದಕ್ಕೆ ಹತ್ತರಷ್ಟು ಎಂದರೆ 50 ರೂಪಾಯಿಗಳನಷ್ಟು ಬಂದರೂ ಕೂಡ ಸಾಧ್ಯವಾಗುವುದಿಲ್ಲ. ಎಂದರೆ, ಜೀವನದ ವಿಧಾನ ಮಾರ್ಪಾಡಾಗಿ, ಬೆಲೆ ಏರತ್ತದೆ. ಆದ್ದರಿಂದ ಈ ಬಡನೌಕರರಿಗೆ ಜೀವನದ ಅನುಕೂಲವನ್ನು ಸಾಕಾದಷ್ಟು, ಸರಿಯಾದ ರೀತಿಯಲ್ಲಿ ಜೀವನವನ್ನು ನಡೆಸಲು ಬೇಕಾದ ಸೌಲಭ್ಯಗಳನ್ನು ಒದಗಿಸಲು ಅನೇಕ ಪ್ರಯತ್ನಗಳು ನಡೆದಿವೆ. ಅನೇಕ ಕಮಿಟಿಗಳು, ಕಮೀಷನ್‌ಗಳು ಈ ಸಮಸ್ಯೆಯನ್ನು ಚರ್ಚಿಸಿವೆ. ಕಾಲಾನುಕಾಲಕ್ಕೆ ಹೊಸಹೊಸ ಕಮೀಷನ್‌ಗಳೂ, ಕಮಿಟಿಗಳೂ ಬಂದು ಈ ಸಮಸ್ಯೆಯನ್ನು ಚರ್ಚಿಸಿವೆ. ನಮ್ಮ ದೇಶಕ್ಕೆ ಬ್ರಿಟಿಷರು ಅಧಿಕಾರಿಗಳಾಗಿದ್ದಾಗ, ಮೇಲಿನ ಅಧಿಕಾರಿಗಳು ಅದರಲ್ಲೂ ಬ್ರಿಟಿಷ್ ಅಧಿಕಾರಿಗಳು ಬಹಳ ಜಾಸ್ತಿಯಾಗಿ ಸಂಬಳವನ್ನು ತೆಗೆದುಕೊಂಡು ನಮ್ಮ ಜನರಿಗೆ ಬಹಳ ಕಡಮೆ ಕೊಟ್ಟಿದ್ದರು. ಅದರಲ್ಲೂ ಈ ಭೇದ ಇದೆ. ಈ ರೀತಿಯಾಗಿ ಇದ್ದದ್ದು ಸ್ವರಾಜ್ಯ ಸ್ಥಾಪನೆಯಾಗುವುದಕ್ಕೆ ಪೂರ್ವದಲ್ಲಿ ಕೆಲವು ತಿಂಗಳುಗಳ ಮುಂಚೆ ಕೇಂದ್ರ ಸರ್ಕಾರದವರು ಒಂದು ಕಮೀಷನ್ ಅನ್ನು ಏರ್ಪಾಡು ಮಾಡಿದರು. ಅದಕ್ಕೆ ಸೆಂಟ್ರಲ್ ಪೇ ಕಮೀಷನ್ ಎಂದು ಹೆಸರು. ಫೆಡರಲ್ ಕೋರ್ಟ್ ಜಡ್ಜ್ ಆಗಿದ್ದ ಶ್ರೀಮಾನ್ ವರದಾಚಾರ್ಯರು ಅದರ ಅಧ್ಯಕ್ಷರಾಗಿದ್ದರು. ಅನೇಕ ಅರ್ಥಶಾಸ್ತ್ರ ನಿಪುಣರ, ದೊಡ್ಡ ತಜ್ಞರು ಆ ಸಮಿತಿಯಲ್ಲಿ ಇದ್ದರು. ಅವರು ನಮ್ಮ ಇಂಡಿಯಾ ದೇಶದಲ್ಲಿ, ಮುಖ್ಯವಾಗಿ ಕೇಂದ್ರದಲ್ಲಿ ಇರತಕ್ಕಂಥ ಸಂಬಳಸಾರಿಗೆಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಬಹಳ ಬೆಲೆಯುಳ್ಳ ವರದಿಯನ್ನು ದೇಶದ ಮುಂದೆ ಇಟ್ಟರು. ಇದು 1947ರಲ್ಲಿ ಪ್ರಕಟವಾಗಿದೆ. ಎಂದರೆ 10 ವರ್ಷಗಳ ಹಿಂದೆ ಪ್ರಕಟವಾಯಿತು ಎಂದು ಹೇಳಬಹುದು. ಈ ವರದಿಯಲ್ಲಿ ಯಾವ ಯಾವ ವಿಷಯಗಳನ್ನು ಚರ್ಚೆಮಾಡಿದೆಯೋ, ಯಾವ ಯಾವ ವಿಷಯಗಳನ್ನು ತತ್ವಶಃ ಅಂಕಿ ಅಂಶಗಳೊಡನೆ ಚರ್ಚೆಮಾಡಿ ಒಂದು ನಿರ್ಧಾರಕ್ಕೆ ಬಂದಿದೆಯೋ ಆ ನಿರ್ಧಾರ ಇನ್ನೂ ಪೂರ್ತಿಯಾಗಿ ಹತ್ತು ವರ್ಷಗಳಾದರೂ ಕೂಡ ಕಾರ್ಯಗತವಾಗಿಲ್ಲ, ಕೇಂದ್ರ ಸರ್ಕಾರದಲ್ಲಿಯೇ ಕಾರ್ಯಗತವಾಗಿಲ್ಲ. ಸರ್ಕಾರಿ ಕೆಳದರ್ಜೆ ನೌಕರರು, ಅದರಲ್ಲೂ ಇಂಡಿಯಾ ಸರ್ಕಾರದಲ್ಲಿ ಎರಡು ರೀತಿಯ ನೌಕರರು ಇದ್ದಾರೆ, ಒಂದು ಸಿವಿಲ್ ಡಿಪಾರ್ಟ್‌ಮೆಂಟ್ ನೌಕರರು, ಇನ್ನು ಬಾಕಿಯವರು ರೈಲ್ವೆ, ಪೋಸ್ಟಲ್ ಇಲಾಖೆಗೆ ಸಂಬಂಧಪಟ್ಟವರು. ಕೆಲವು ಸಂದರ್ಭಗಳಲ್ಲಿ ಜೀವನದ ಒತ್ತಡ ಬಹಳ ಜಾಸ್ತಿಯಾಗಿ ಜೀವನವನ್ನು ಸರಿಯಾಗಿ ನಡೆಸಲಿಕ್ಕೆ ಸಾಧ್ಯವಿಲ್ಲದೇ ಈ ಪೋಸ್ಟಲ್ ಇಲಾಖೆಯ ನೌಕರರು ಮತ್ತು ರೈಲ್ವೆ ಇಲಾಖೆಯ ನೌಕರರು ಮುಷ್ಕರ ಮಾಡುವುದಕ್ಕೆ ಸರ್ಕಾರದವರಿಗೆ ಎಚ್ಚರಿಕೆ ಕೊಟ್ಟರು.

[MR. DEPUTY SPEAKER in the Chair]

ಈ ಸಭೆಗೆ ಗೊತ್ತಿರುವಂತೆ ಕೆಲವು ದಿವಸ ಪೋಸ್ಟಲ್ ಇಲಾಖೆಯ ಮುಷ್ಕರ ನಡೆಯಿತು. ತತ್ಪರಿಣಾಮವಾಗಿ ಸರ್ಕಾರದವರು ಎಚ್ಚೆತ್ತುಕೊಂಡು ಪೋಸ್ಟಲ್ ಜವಾನರುಗಳ ಮತ್ತು ಪೋಸ್ಟಲ್ ನೌಕರರುಗಳ ಸಂಬಳವನ್ನು ಜಾಸ್ತಿಮಾಡಿದರು. ಇವೊತ್ತಿನ ದಿವಸ ಒಂದು ಸಂತೋಷದ ಸಂಗತಿಯೇನೆಂದರೆ, ಯಾವ ಇಲಾಖೆಯವರೂ ಕೂಡ ಪೋಸ್ಟಲ್ ಇಲಾಖೆ ನೌಕರರಂತೆ ಅಷ್ಟು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ; ಅವರು ಸಂತುಷ್ಟರಾಗಿದ್ದಾರೆ. ಇದು ಸರ್ಕಾರಕ್ಕೆ ಅತ್ಯಂತ ಮುಖ್ಯವಾದ ಇಲಾಖೆ, ಸರ್ಕಾರದ ಕೆಲಸ ನಡೆಯಬೇಕಾದರೆ ಜೀವನಾಡಿಯಂತಿರುವ ಇಲಾಖೆ ಎಂದು ಇದಕ್ಕೆ ಮೊಟ್ಟಮೊದಲು ಗಮನಕೊಟ್ಟರು. ಹೀಗೆ ಇನ್ನೂ ಅನೇಕ ಇಲಾಖೆಗಳಿಗೆ ಮಾಡಿದ್ದಾರೆ. ರೈಲ್ವೆ ನೌಕರರ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನಪಟ್ಟು ಅವರ ವೇತನಗಳನ್ನು ಒಂದು ರೀತಿ ಉತ್ತಮಪಡಿಸಿದರು. ಸೆಕ್ರೆಟೇರಿಯಟ್‌ನ ಮತ್ತು ಇತರ ನೌಕರರ ಸಂಬಳವನ್ನು ಸ್ವಲ್ಪ ಜಾಸ್ತಿ ಮಾಡುತ್ತ ಬಂದಿದ್ದಾರೆ. ಆದರೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಅಧಿಕಾರಿಗಳ ಕ್ಷೇತ್ರದಲ್ಲೂ ಇಲಾಖೆಗಳಲ್ಲೂ ಅತ್ಯಂತ ಶೋಚನೀಯವಾದ ಸ್ಥಿತಿಯಿದೆ. ಏಕೆಂದರೆ ಇಲ್ಲಿನ ನೌಕರರ ಸಂಬಳಗಳನ್ನು ಕೇಂದ್ರ ಸರ್ಕಾರದ ಮತ್ತು ಇತರ ಪ್ರಾಂತ ಸರ್ಕಾರಗಳ ಅಧಿಕಾರಿಗಳ ಸಂಬಳಕ್ಕೆ ಹೋಲಿಸಿದರೆ ನಮ್ಮ ಅಧಿಕಾರಿಗಳ ಸಂಬಳ ಕಡಮೆಯೆಂದೇ ಹೇಳಬಹುದು. ಸಿವಿಲ್ ಸರ್ವೀಸಿನವರಿಗೆ 3-4 ಸಾವಿರ ರೂಪಾಯಿಗಳ ಸಂಬಳಗಳಿವೆ, ಆಮೇಲೆ I.A.S.ನವರಿಗೆ 1,800 ರೂಪಾಯಿಗಳ ಸಂಬಳವಿದೆ. ಆದರೆ ಅದೇ ಕೆಲಸ ಮಾಡುತ್ತಿರುವ ನಮ್ಮ ಇಲ್ಲಿನ ಅಧಿಕಾರಿಗಳಿಗೆ ಸಂಬಳ ಕಡಮೆ. ಹಾಗೆಯೇ ನಾನ್‌ಗೆಜೆಟೆಡ್ ಕೇಡರಿನಲ್ಲಿರುವವರ ಸಂಬಳ ನೋಡಿದರೆ ಇಂಡಿಯಾ ದೇಶದ ಯಾವ ರಾಜ್ಯದಲೂ ಕೂಡ ಇಷ್ಟು ಕನಿಷ್ಠ ಪ್ರಮಾಣದ ಸಂಬಳ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ನಮ್ಮವರು ದುಡಿಯುವುದರಲ್ಲಿ ಕಡಮೆಯಿಲ್ಲ, ಬುದ್ಧಿಶಕ್ತಿಯಲ್ಲಿ ಕಡಮೆಯಿಲ್ಲ, ಭಕ್ತಿ ಶ್ರದ್ಧೆಗಳಲ್ಲಿ ಕಡಮೆಯಿಲ್ಲ. ಆದರೂ ನಮ್ಮ ಮೈಸೂರು ನೌಕರರಿಗೆ ಸಂಬಳ ಬಹಳ ಕಡಮೆ. ಅದೇಕೆ ಹೀಗಾಯಿತೆಂಬುದನ್ನು ಸ್ವಲ್ಪ ಯೋಚನೆ ಮಾಡಿದರೆ, ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಒಂದು ಶಂಕೆ ಕಂಡುಬರುತ್ತದೆ. 1881ರಲ್ಲಿ ರೆಂಡಿಷನ್ ಆದ ಮೇಲೆ ಮಹಾರಾಜರುಗಳು ಪುನಃ ಅಧಿಕಾರಕ್ಕೆ ಬಂದಮೇಲೆ ಬಹಳ ಕ್ಷಾಮ ಸ್ಥಿತಿಯಿದ್ದು ಒಂದು ಕೋಟಿ ರೂಪಾಯಿಗಳ ವರಮಾನ ಮಾತ್ರ ಬರುತ್ತಿತ್ತು. ಆಗಿನ ಕಾಲದ ವರಮಾನಕ್ಕನುಗುಣವಾಗಿ ಆಗ ಬಹಳ ಕಡಮೆ ಸಂಬಳಗಳಿದ್ದುವು. ಇದಲ್ಲದೆ ಹಿಂದಿನ ಮೈಸೂರು ಬ್ರಿಟಿಷ್ ರಾಜ್ಯಕ್ಕೆ ಸೇರಿದ್ದರಿಂದ ಅನೇಕ ತೆರಿಗೆಗಳನ್ನು ಬ್ರಿಟಿಷರು ವಸೂಲು ಮಾಡಿದರು. ಅದರಲ್ಲಿ ಮೈಸೂರಿಗೆ ಭಾಗ ಬರುತ್ತಿರಲಿಲ್ಲ. ಆದ್ದರಿಂದ ಇಲ್ಲಿ ಬಹಳ ಕಡಮೆ ವರಮಾನವಿತ್ತು. ಕ್ರಮೇಣ ವರಮಾನ ಎರಡು ಕೋಟಿ ಮೂರು ಕೋಟಿ ರೂಪಾಯಿಗಳಿಗೇರಿತು. ಯುದ್ಧಕ್ಕೆ ಪೂರ್ವದಲ್ಲಿ ನಾಲ್ಕೈದು ಕೋಟಿಯಾಯಿತು. ಆದ್ದರಿಂದ ಈ ನಾಲ್ಕೈದು ಕೋಟಿಗಳಲ್ಲಿ ಹೆಚ್ಚು ಸಂಬಳ ಕೊಡುವುದಕ್ಕಾಗುತ್ತಿರಲಿಲ್ಲ. ಅಲ್ಲದೆ ನಮ್ಮ ಮೈಸೂರು ಮತ್ತು ಮದರಾಸು ಭಾಗಗಳಲ್ಲಿ ವಿದ್ಯಾವಂತರ ಸಂಖ್ಯೆ ಬಹು ಜಾಸ್ತಿ, ಸರ್ಕಾರಿ ನೌಕರಿಗೆ ನುಗ್ಗುವವರ ಸಂಖ್ಯೆ ಬಹು ಜಾಸ್ತಿ; ಎಕನಾಮಿಕ್ಸಿನಲ್ಲಿ ಹೇಳುವ ಹಾಗೆ ಸಪ್ಲೈ ಮತ್ತು ಡಿಮ್ಯಾಂಡ್‌ನಲ್ಲಿ ಡಿಮ್ಯಾಂಡ್‌ಗಿಂತ ಸಪ್ಲೈ ಬಹಳ ಜಾಸ್ತಿಯಾಗಿತ್ತು. ಇದರಿಂದ ಇಲ್ಲಿ ಬಹಳ ಕಡಮೆ ಸಂಬಳವಿತ್ತು. ಆಗ ಅದರಂತೆ ಮುಂದುವರಿಯಿತು. ಕೇಂದ್ರ ಸರ್ಕಾರದವರು ಒಂದು ರೀತಿಯಾಗಿ ತಮ್ಮ ನೌಕರರ ಸ್ಥಿತಿಯನ್ನು ಸ್ವಲ್ಪ ಉತ್ತಮ ಪಡಿಸಿದರು. ಆದರೆ ಮೈಸೂರು ಸಂಸ್ಥಾನದಲ್ಲಿ ಈ ಜವಾಬ್ದಾರಿ ಸರ್ಕಾರ ಬರುವವರೆಗೆ ಸರ್ಕಾರದವರು ಸಂಬಳಗಳ ವಿಷಯದಲ್ಲಿ ಯಾವ ವಿಧವಾದ ಆಸಕ್ತಿಯನ್ನೂ ವಹಿಸಿರಲಿಲ್ಲ; ಏನೋ ಒಂದು ರೀತಿಯಾಗಿ ನಡೆದುಕೊಂಡು ಬಂತು. ಸರ್ಕಾರಿ ನೌಕರರು ಬಾಯಿಲ್ಲದೆ ಯಂತ್ರಗಳಂತೆ ಮೈಸೂರಿನಲ್ಲಿ ದುಡಿಯುತ್ತ ಬಂದರು. ಆಮೇಲೆ ಕೇಂದ್ರ ಸರ್ಕಾರದಲ್ಲಿ ಪೇ ಕಮೀಷನ್ ವರದಿ ಬರುವ ವೇಳೆಗೆ ಸರಿಯಾಗಿ ಆಗ ದಿವಾನರಾಗಿದ್ದ ಸರ್. ಎ. ರಾಮಸ್ವಾಮಿ ಮೊದಲಿಯಾರ್ ಅವರು ಒಂದು ದೃಷ್ಟಿಯಿಟ್ಟು ಇಲ್ಲೂ ಕೂಡ ಏನಾದರೂ ಸ್ಟ್ರೈಕ್ ಆರಂಭವಾಗುತ್ತದೆಯೋ ಏನೋ ಎಂದು ಊಹಿಸಿ ಸಂಬಳಗಳನ್ನು ಜಾಸ್ತಿ ಮಾಡಿದರು. ಅನೇಕ ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ಖರ್ಚು ಜಾಸ್ತಿಯಾಯಿತು. ಆ ಸಂದರ್ಭದಲ್ಲಿ ಸಂಬಳದ ವಿಚಾರದಲ್ಲಿ ಸುಮಾರು ಒಂದು ಒಂದೂವರೆ ತಿಂಗಳು ರೈಲ್ವೆ ಸ್ಟ್ರೈಕ್ ಮೈಸೂರು ಸಂಸ್ಥಾನದಲ್ಲಿ ನಡೆಯಿತು. ಆಗ ಸರ್ ಎ. ರಾಮಸ್ವಾಮಿಮೊದಲಿಯಾರ್ ಅವರು ಬಹಳ ಎಚ್ಚತ್ತು ಸ್ವರಾಜ್ಯ ಬರುವುದಕ್ಕೆ ಮುಂಚೆ ಸಂಬಳಗಳನ್ನು ಸ್ವಲ್ಪ ಜಾಸ್ತಿ ಮಾಡಿದರು. ಸ್ವರಾಜ್ಯ ಬಂದ ಮೇಲೆ ಜನರ ಆಶೋತ್ತರಗಳು ಈಡೇರುತ್ತವೆಂದು ನಿರೀಕ್ಷಿಸಲು ಸಾಧ್ಯವಾಯಿತು. ನಮ್ಮ ನಾನ್‌ಗೆಜೆಟೆಡ್ ನೌಕರರು ಹೊಸ ಸರ್ಕಾರ ಬಂತು, ಸ್ವರಾಜ್ಯ ಬಂತು, ನಮ್ಮವರೇ ಈಗ ಅಧಿಕಾರಕ್ಕೆ ಬಂದರು, ನಮ್ಮ ಮಂತ್ರಿಗಳೇ ಇದ್ದಾರೆ, ನಾವು ಆರಿಸಿದ ಜನರೇ ಮಂತ್ರಿಗಳಾಗಿದ್ದಾರೆ, ಅವರು ನಮ್ಮ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತವರು, ನಮ್ಮ ಮನೆಗಳಲ್ಲಿಯೇ ಊಟ ಮಾಡಿದವರು ಬಂದಿದ್ದಾರೆ. ಆದ್ದರಿಂದ ನಮ್ಮ ಸ್ಥಿತಿ ಬಹಳ ಉತ್ತಮವಾಗುತ್ತದೆ ಎಂದು ನಿರೀಕ್ಷಣೆ ಮಾಡುತ್ತ ಬಂದರು; ಒಂದು ರೀತಿಯಾಗಿ ಉತ್ಸಾಹ ಬಂತು. ಆದರೆ ಆ ಉತ್ಸಾಹ ಎಷ್ಟರಮಟ್ಟಿಗೆ ಸಫಲವಾಗಿದೆಯೆಂಬುದು ಆಲೋಚಿಸಬೇಕಾದ ವಿಷಯ. ನನಗೆ ತಿಳಿದಮಟ್ಟಿಗೆ ನಮ್ಮ ಮಂತ್ರಿಗಳು ಬಾಯಲ್ಲಿ ಬಹಳ ಒಳ್ಳೆಯ ಮಾತುಗಳನ್ನಾಡುತ್ತಾರೆ, "ಅಯ್ಯೋ ಪಾಪ, ಬಾ, ಚೆನ್ನಾಗಿದ್ದೀಯಾ" ಎಂದು ಕೇಳುತ್ತಾರೆ. ಆದರೆ ಮನೆಯಲ್ಲಿ ಎರಡು ಹೊತ್ತು ಊಟಕ್ಕಿದೆಯೆ ಎಂದು ವಿಚಾರಿಸುವುದು ಬಹು ಕಷ್ಟ. ಕನ್ನಡದಲ್ಲಿ 'ಚಿಕ್ಕಪ್ಪ ಗಿಣಿ ಸಾಕಿದ ಹಾಗೆ ಸಾಕಿದ' ಎಂದು ಹೇಳುವಂತೆ ಮಾಡಿದ್ದಾರೆ. ಅನ್ನ ಬಟ್ಟೆಗೆ ಸರಿಯಾದ ಸೌಕರ್ಯ ಮಾಡದೆ ನಮ್ಮ ಸರ್ಕಾರದವರು ಬಹಳ ಮುದ್ದಾದ ಮಾತನ್ನು ಬಹಳ ಹಿತವಾಗಿ ಆಡುತ್ತಾರೆ. ಎಲ್ಲಿಂದ ಹಣ ತಂದು ಕೊಡಬೇಕೆಂಬ ಪ್ರಶ್ನೆಯಿದೆ. ಹಳೆಯ ಮೈಸೂರಿನಲ್ಲಿ ಈ ರೀತಿ ಹೇಳುತ್ತಿದ್ದರು. ಹಳೆಯ ಮೈಸೂರಿನ ಸ್ಥಿತಿ ಹಾಗಿತ್ತು. ಹೊಸ ಮೈಸೂರು ಉದಯವಾಗುವುದಕ್ಕೆ ಪೂರ್ವಭಾವಿಯಾಗಿ ನಮ್ಮ ಸರ್ಕಾರದ ನೌಕರರ ಸಂಬಳವನ್ನು ಪರಿಶೀಲಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಅದಕ್ಕೆ ಪೇಸ್ಟ್ರಕ್ಚರ್ ಕಮಿಟಿ Pay Structure Committee ಎಂದು ಹೆಸರು. ನಮ್ಮ ಸಭೆಯ ಸದಸ್ಯರಾಗಿರತಕ್ಕ ಶ್ರೀ ಮ್ಯಾಸ್ಕರನ್‌ಹ್ಯಾಸ್‌ರವರೇ ಅದರ ಅಧ್ಯಕ್ಷರಾಗಿದ್ದರು. ಮತ್ತು ಈ ಸಭೆಯ ಇನ್ನು ಕೆಲವು ಸದಸ್ಯರು ಅದರಲ್ಲಿದ್ದರು.

ಉಪಾಧ್ಯಕ್ಷರು.—ತಾವು ಪೀಠಿಕಾ ರೂಪವಾಗಿ ಹೇಳುವ ವಿಚಾರಕ್ಕೆಯೇ ಹೆಚ್ಚು ಕಾಲ ತೆಗೆದುಕೊಂಡಿದ್ದೀರಿ. ಸ್ವಲ್ಪ ಜಾಗ್ರತೆಯಾಗಿ ಮುಖ್ಯವಿಷಯಕ್ಕೆ ಬರುವುದು ಒಳ್ಳೆಯದೆಂದು ಕಾಣುತ್ತದೆ. ಪ್ರಾಯಶಃ ತಾವು ಹೊಸ ಮೈಸೂರು ರಾಜ್ಯದಲ್ಲಿರತಕ್ಕ ಎಲ್ಲ ಭಾಗಗಳ ನಾನ್‌ಗೆಜೆಟೆಡ್ ಆಫೀಸರುಗಳ ಸ್ಕೇಲಿಗೂ ಇಲ್ಲಿನವರ ಸ್ಕೇಲಿಗೂ ಇರುವ ವ್ಯತ್ಯಾಸ ಹೇಳಿದರೆ ಸಹಾಯಕವಾಗುತ್ತದೆಂದು ಕಾಣುತ್ತದೆ.

Sri B. S. KUSHALAPPA.—Do the rules provide for giving so much time to an Hon'ble Member ?

Mr. DEPUTY SPEAKER.—Under the Rules, the prime mover of the resolution will ordinarily be given 30 minutes and other members 15 minutes.

The House will now rise and meet agein at Thirty minutes past Ten.

The House adjourned for Lunch at Ten of the Clock and reassembled at Thirty minutes past Ten of the Clock.

[MR. DEPUTY SPEAKER in the Chair.]

ಶ್ರೀ ಪಿ. ಆರ್. ರಾಮಯ್ಯ.-ಸ್ವಾಮಿ, ರಾಜ್ಯ ಪುನರ್ ನಿರ್ಮಾಣವಾದಮೇಲೆ ನಮ್ಮ ಹೊಸ ಮೈಸೂರು ರಾಜ್ಯಕ್ಕೆ, ಈ ಮೊದಲು ಮೈಸೂರಿಗೆ ಸೇರದೆ ಇದ್ದಂತಹ ಪ್ರದೇಶಗಳಿಂದ ಬಂದಂತಹ Non-gazetted ನೌಕರರಿಗೆ ವಿಧ ವಿಧವಾದ ಸಂಬಳಗಳಿವೆ.

ಶ್ರೀ ಸೋಲೂರು ಸಿದ್ದಪ್ಪ (ಮಾಗಡಿ.)—ಸ್ವಾಮಿ, ಟ್ರೆಜರಿ ಬೆಂಚುಗಳಲ್ಲಿ ಸರ್ಕಾರದ ಪರವಾಗಿ ಯಾವ ಮಂತ್ರಿಗಳೂ ಇಲ್ಲ.

Mr. DEPUTY SPEAKER.—Hon'ble Members are requested not to cross the floor.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೂ ಹಳೆಯ ಮೈಸೂರಿನ ನೌಕರರ ಸಂಬಳ ಸಾರಿಗೆಗಳು ತೀರ ಕಡಮೆಯಾಗಿವೆ ಎನ್ನುವುದನ್ನು ಕೆಲವು ಉದಾಹರಣೆಗಳಿಂದ ತಿಳಿಸಬೇಕಾಗಿದೆ. ಈಗ ಮೈಸೂರಿನಲ್ಲಿ Peons, Laskars Dalayets ಗಳ ಸಂಬಳ ಶ್ರೇಣಿ 14–½–18 ರೂಪಾಯಿಗಳಾಗಿದೆ. ಮದರಾಸಿನಲ್ಲಿಯಾದರೋ, ಈ Peon ಗಳ ಸಂಬಳ ಶ್ರೇಣಿ 18–½–25 ರೂಪಾಯಿಗಳಷ್ಟಿದೆ. ಹೈದರಾಬಾದಿನ Peon ಗಳ ಸಂಬಳ ಶ್ರೇಣಿ 22—1—26 ರೂಪಾಯಿಗಳಾಗಿದೆ. ಬೊಂಬಾಯಿ Peon ಗಳ ಪೇ ಸ್ಕೇಲು 35—½—40 ರೂಪಾಯಿಗಳು. ಹಾಗೆಯೇ ಇನ್ನು Dafter-bands ಗೆ ಇಲ್ಲಿ 25 ಇದ್ದರೆ ಬೊಂಬಾಯಿಯಲ್ಲಿ 50 ರೂಪಾಯಿಗಳಿವೆ. ಆ ಮೇಲೆ ನಮ್ಮ ಮೈಸೂರಿನಲ್ಲಿ I Division Clerks ಗಳಿಗೆ 60–180 ರವರಗೆ, ಇದ್ದರೆ ಅದೇ ಮದರಾಸಿನಲ್ಲಿ 90–175 ಇದೆ. ಹೈದರಾಬಾದಿನಲ್ಲಿ 170–320 ಇದೆ. ಬೊಂಬಾಯಿನಲ್ಲಿ 210–15–300 ಇದೆ. II Division Clerk ಗಳಿಗೆ ಮೈಸೂರಿನಲ್ಲಿ 45 ರಿಂದ 100 ರವರೆಗೆ ಇದೆ. ಮದರಾಸಿನಲ್ಲಿ 80—110 ಇದೆ. ಹೈದರಾಬಾದಿನಲ್ಲಿ 105—164 ಇದೆ. ಬೊಂಬಾಯಿನಲ್ಲಿ 120—250 ಇದೆ. Constables ಗೆ ಮೈಸೂರಿನಲ್ಲಿ 22–½–32 ಇದೆ. 30–½–40 ಮದರಾಸಿನಲ್ಲಿದೆ.

Sri V. M. MASCARENHAS (St. John's Hill).—May I rise on apoint of order Sir ? The Hon'ble member is taking away the precious time of the House in reading matters which are in print and which are not pertinent to the resolution on hand.

Mr. DEPUTY SPEAKER.—There is no point of order. The Hon'ble Member may go on with his speech but try to be brief.

Sri P. R. RAMAIYA.—I want to make a comparative statement and I am therefore reading from the report.

ಕೆಲವು ಉದಾಹರಣೆಗಳನ್ನು ಮಾತ್ರ ನಾನು ಕೊಡುತ್ತಿದ್ದೇನೆ. Constable ವಿಷಯ ಹೇಳುತ್ತಿದ್ದೆ. ಮೈಸೂರಿನಲ್ಲಿ 22–½–30 ಇದೆ. ಬೊಂಬಾಯಿನಲ್ಲಿ 35–40 ಇದೆ. ಇನ್ನು Primary ಮತ್ತು Middle School Teachers ಗಳ ಸಂಬಳಗಳನ್ನು ತೆಗೆದು ಕೊಂಡರೆ :-

Primary School Teachers.

Mysore ನಲ್ಲಿ 30—55
Madras ನಲ್ಲಿ 30—50
Hyderabad ನಲ್ಲಿ 54—130
Bombay ನಲ್ಲಿ 65—90

Middle School Teachers.

Mysore ನಲ್ಲಿ 40—80
Bombay ನಲ್ಲಿ 65—90

Graduate Teachers.

Mysore ನಲ್ಲಿ 130—200
Bombay ನಲ್ಲಿ 200 ರಿಂದ

ಈ scalesನಲ್ಲಿ ನಾನು ಕೆಲವನ್ನು ಮಾತ್ರ ಹೇಳಿದ್ದೇನೆ. ಮೇಲೆ ಹೇಳಿದ ವ್ಯತ್ಯಾಸವಷ್ಟೇ ಅಲ್ಲದೆ Central Government ಮತ್ತು State Government ಗಳ ಸ್ಕೇಲುಗಳಲ್ಲಿ ಕೂಡ ವ್ಯತ್ಯಾಸವಿದೆ. ಮೈಸೂರಿನಲ್ಲಿ Peon ಗಳಿಗೆ 30 ರೂಪಾಯಿಗಳ ಸಂಬಳ, Allowance 20 ಇದೆ. State Governmentನಲ್ಲಿ Peons ಗಳಿಗೆ ಒಟ್ಟು 50 ರೂಪಾಯಿಗಳು ಬರುತ್ತದೆ. Central Government ನಲ್ಲಿ Peonsಗೆ ಒಟ್ಟು ಎಲ್ಲ Allowance ಗಳೂ ಸೇರಿ 80 ರೂಪಾಯಿಗಳು ಬರುತ್ತವೆ. Graduate Clerk ಗಳಿಗೆ Stateನಲ್ಲಿ 83 ರೂಪಾಯಿಗಳು ಬರುತ್ತವೆ. Centreನಲ್ಲಿ 145 ರೂಪಾಯಿಗಳು ಸಿಕ್ಕುತ್ತವೆ. ಹೀಗೆ ನಾನು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇದೆಲ್ಲ ಈ ವರದಿಯಲ್ಲೇ ಇದೆ.

ಈಗ ನಾನು ಈ ಸಭೆಯಲ್ಲಿ ತಿಳಿಸತಕ್ಕದ್ದೇನೆಂದರೆ ಈಗ ಹೊಸದಾಗಿ ಬಂದಿರತಕ್ಕ ನೌಕರರ ಕೆಲಸವೂ ಇಲ್ಲಿನ ನೌಕರರ ಕೆಲಸವೂ ಒಂದೇ ರೀತಿಯಾಗಿದ್ದರೆ ಅವರ ಸಂಬಳ ಸಾರಿಗೆಗಳು ಒಂದೇ ಸಮನಾಗಿರಬೇಕು. "Equal

work, Equal pay'' ಎನ್ನುವ ತತ್ತ್ವವನ್ನು ಇಟ್ಟುಕೊಂಡು ನಾವು ಸಂಬಳಗಳನ್ನು ಪುನರ್ವಿಂಗಡಣೆ ಮಾಡಬೇಕಾಗಿದೆ. ಆದುದರಿಂದ ಇದೊಂದು ತ್ವರಿತವಾಗಿ ಮಾಡಬೇಕಾದಂತಹ ಕೆಲಸ. ಮುಖ್ಯಮಂತ್ರಿಗಳು ಒಂದು ಸಾರಿ ಭಾಷಣ ಮಾಡುತ್ತ ''ಮದರಾಸಿನ ಸ್ಕೇಲಿಗೆ ತಕ್ಕಂತೆ ಮೈಸೂರಿನ ಸಂಬಳಗಳನ್ನು ತರಬೇಕಾದರೆ 4 ಕೋಟಿ ವೆಚ್ಚ ಹೆಚ್ಚಾಗುತ್ತದೆ, ಬೊಂಬಾಯಿ ಸ್ಕೇಲಿಗೆ ತರಬೇಕಾದರೆ ಏಳು ಎಂಟು ಕೋಟಿ ಜಾಸ್ತಿ ಖರ್ಚಾಗುತ್ತದೆ. Mascarenhas Committee Report ನಂತೆ ಸಂಬಳಗಳನ್ನು ಏರಿಸಬೇಕಾದರೆ 2 ಕೋಟಿ ಖರ್ಚು ಜಾಸ್ತಿಯಾಗುತ್ತದೆ ಎಂದು ಹೇಳಿದ್ದಾರೆ. ಖರ್ಚು ಎಷ್ಟೇ ಜಾಸ್ತಿಯಾಗಲಿ ಈಗ ಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಬೇಕು. ಇಲ್ಲದೆ ಹೋದರೆ ಅಸಮಾಧಾನ ಅಸಂತುಷ್ಟಿ ಜಾಸ್ತಿಯಾಗುತ್ತವೆ. ಸರ್ಕಾರದ ಕೆಲಸ ವಿಚಕ್ಷಣೆಯಿಂದ ನಡೆಯುವುದಿಲ್ಲ. Dearness Allowance ನಲ್ಲಿಯೂ ಕೂಡ ಬಹಳ ಅಂತರವಿದೆ. ಪ್ರಾಂತಗಳಲ್ಲಿಯೇ ಒಂದುರೀತಿ, ಕೇಂದ್ರದಲ್ಲಿಯೇ ಒಂದು ರೀತಿ ಇದೆ. ಇದನ್ನು ಕೂಡ ಸರಿಪಡಿಸಬೇಕು. ಈಗ Non-gazetted Cadre ನಲ್ಲಿರತಕ್ಕವರು ಈ ಸರ್ಕಾರದಿಂದ ತುಂಬಾ ನಿರೀಕ್ಷಣೆ ಮಾಡುತ್ತಿದ್ದಾರೆ. ಈಗ ಎಲ್ಲೆಲ್ಲಿಯೂ ಇದೇ ವಿಷಯ ಕೇಳಿಬರುತ್ತಿದೆ. ನಮ್ಮ ಬೆಂಗಳೂರಿನಲ್ಲಿ ಎಲ್ಲೆಲ್ಲಿಯೂ ಈ ವಿಷಯವೇ ವಿನಾ ಬೇರೆ ವಿಷಯ ಚರ್ಚೆಯಾಗುತ್ತಿಲ್ಲ. ಹೊಸರಾಜ್ಯ ಸ್ಥಾಪನೆಯಾದ ಮೇಲೆ ಈ ವಿಷಯವು ಎಲ್ಲರ ಮನಸ್ಸನ್ನೂ ಆಕರ್ಷಿಸಿದೆ, ಏಕೆಂದರೆ, ಈಗಿರುವ ಅಂತರ ಬಹಳ ಅನ್ಯಾಯಕರ, ಒಂದೇ ಕೆಲಸ ಮಾಡುವವರಿಗೆ ಇಷ್ಟು ಅಂತರದ ಸಂಬಳ ಇರಬಾರದು. ಈಗಾಗಲೇ ಇದರಿಂದ ಬಹಳ ತೊಂದರೆಯಾಗಿದೆ. ಹೊಸರಾಜ್ಯ ಸರ್ಕಾರವು ಒಂದು ಸಮಿತಿ ಏರ್ಪಡಿಸಿ ಇದನ್ನೆಲ್ಲ ಪರಿಶೀಲನೆ ಮಾಡುತ್ತಿರುವುದು ಬಹಳ ಸಂತೋಷದ ಸಂಗತಿ. ಆದರೆ ಸುಮ್ಮನೆ ಪರಿಶೀಲನೆ, ಪರಿಶೀಲನೆ ಎಂದು ಕುಳಿತರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಕೇಂದ್ರ ಸರ್ಕಾರವೂಕೂಡ ಇದಕ್ಕಾಗಿ ಹಣಸಹಾಯ ಮಾಡಲೇಬೇಕು. ಈಗ ಇದೊಂದು ದೊಡ್ಡರಾಜ್ಯವಾದುದರಿಂದ, ಇದರ ಎಲ್ಲ ಭಾಗಗಳಲ್ಲಿಯೂ ಒಂದೇರೀತಿಯ ಸಂಬಳ ಇರಬೇಕಾಗಿರುವುದು ಅಗತ್ಯ. ಬಹುಶಃ ಈ ವಿಷಯವನ್ನು ಪುನಃ ಪರಿಶೀಲಿಸಬೇಕಾಗಬಹುದು. ನಮ್ಮ ಇಂಡಿಯಾದೇಶದಲ್ಲೆಲ್ಲ Non-gazetted cadre ಗಳಲ್ಲಿ uniformity ತರುವುದಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಪುನಃ ಪರಿಶೀಲನೆಮಾಡಲು ಸಲಹೆ ಕೊಡಬಹುದು. ಬಹುಶಃ ಈ ವ್ಯತ್ಯಾಸಗಳನ್ನೆಲ್ಲ ಆಗ ಸರಿಪಡಿಸಬೇಕಾಗುತ್ತದೆ. ಹಾಗೆ ಸರಿಪಡಿಸುವುದಕ್ಕೆ ಸ್ವಲ್ಪ ನಿಧಾನವಾಗಬಹುದು. ಮೈಸೂರು ದೇಶದಲ್ಲಿರುವ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಮುಖ್ಯಮಂತ್ರಿಗಳು ಮತ್ತು ಮಂತ್ರಿ ಮಂಡಲದವರು ಕೇಂದ್ರಸರ್ಕಾರವನ್ನು ಈ ವಿಚಾರದಲ್ಲಿ ಒತ್ತಾಯಮಾಡಿ ಎಷ್ಟುದುಡ್ಡು ಬೇಕಾದರೂ ಸಹ ತರಿಸಿಕೊಳ್ಳಬಹುದು. ಎಂಟುಕೋಟಿ ರೂಪಾಯಿಗಳು ಹೆಚ್ಚಲ್ಲ. ಎಂಟುಕೋಟಿ ರೂಪಾಯಿಗಳನ್ನು ತರಿಸಿಕೊಂಡಾದರೂ ಸಂಬಳಗಳನ್ನು ಜಾಸ್ತಿ ಮಾಡಬೇಕು ಮತ್ತು ಅದು ಎಲ್ಲರಿಗೂ ಸರಿಯಾಗಿ ಪಾವತಿಯಾಗುವಂತೆ ಮಾಡಬೇಕು. ಮುಖ್ಯಮಂತ್ರಿಗಳಾದ ಶ್ರೀಯುತ ನಿಜಲಿಂಗಪ್ಪನವರು, ಮಂತ್ರಿಗಳಾಗುವುದಕ್ಕೆ ಪೂರ್ವದಲ್ಲಿ ಮೂರು ನಾಲ್ಕು ತಿಂಗಳುಗಳ ಹಿಂದೆ ಈ ಸಮಸ್ಯೆಯ ಬಗ್ಗೆ ವಿಶೇಷವಾಗಿ ಮಾತನಾಡಿದ್ದಾರೆ. ಅದು ಈ ಸಭೆಯ ಅನೇಕ ಸದಸ್ಯರ ಗಮನದಲ್ಲಿದೆ. ಹೊಸರಾಜ್ಯ ಆದಮೇಲೆ ಬೊಂಬಾಯಿನಿಂದ ಬರುವವರ ಸಂಬಳವನ್ನು ಕಡಮೆ ಮಾಡುವುದಿಲ್ಲ ; ಮದರಾಸಿನಿಂದ ಬರುವವರ ಸಂಬಳವನ್ನೂ ಕಡಮೆಮಾಡುವುದಿಲ್ಲ ; ಮೈಸೂರಿನವರ ಸಂಬಳವನ್ನು ಆದಷ್ಟು ಉತ್ತಮಗೊಳಿಸುತ್ತೇವೆ, ಅವರ ಸಂಬಳವನ್ನು ಇತರರ ದರ್ಜೆಗೆ ತರುವುದಕ್ಕೆ ಪ್ರಯತ್ನಮಾಡುತ್ತೇವೆ, ನಮ್ಮ ಮೈಸೂರಿನಲ್ಲಿ ಅಂಥ ದಾರಿದ್ರ್ಯವಿಲ್ಲ. ಮನಸ್ಸುಮಾಡಿದರೆ ಆಗುತ್ತದೆ ಎಂಬುದಾಗಿ ಅವರು ಮಂತ್ರಿಗಳಾಗುವುದಕ್ಕೆ ಮುಂಚೆ ಒಂದು ಅಶ್ವಾಸನೆಯನ್ನು ಕೊಟ್ಟಿದ್ದರು. ಈಗ ಆ ಆಶ್ವಾಸನೆಯನ್ನು ಪೂರ್ತಿಮಾಡುವ ಕಾಲಬಂದಿದೆ. ಈಗ ಅದನ್ನು ಪೂರ್ತಿಮಾಡಬೇಕು. ಸರ್ಕಾರದವರು ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೇನೆ. ಯಾವಾಗ ತೆಗೆದುಕೊಳ್ಳುತ್ತಾರೆಯೋ, ಗೊತ್ತಿಲ್ಲ. ಅಂತೂ ಈ ವಿಷಯದಲ್ಲಿ ಜನಗಳಿಗೆ ಬಹಳ ಆಸೆ ಇದೆ.

ಇನ್ನೊಂದು ವಿಷಯವೇನೆಂದರೆ ನಮ್ಮ ಮೈಸೂರು ಸರ್ಕಾರದಲ್ಲಿ ಒಂದೊಂದು ಇಲಾಖೆಯಲ್ಲಿ ಒಂದೊಂದು ರೀತಿ ಗ್ರೇಡುಗಳಿವೆ. ಅದನ್ನೆಲ್ಲ ಸರಿಪಡಿಸಿ ಕೆಲವು ಎಲ್ಲರಿಗೂ ಅನ್ವಯಿಸತಕ್ಕ ಗ್ರೇಡುಗಳನ್ನು ಮಾತ್ರ ಮಾಡಿಕೊಳ್ಳಬೇಕು. ಮ್ಯಾಸ್ಕರನ್ಹಾಸ್ ಸಮಿತಿಯವರು ಎಲ್ಲವನ್ನೂ ಎಂಟು ಗ್ರೇಡುಗಳಾಗಿ ಮಾಡಿದ್ದಾರೆ. Equal pay for equal work ಎಂದು ಒಂದೇ ರೀತಿಯ ಕೆಲಸಕ್ಕೆ ಒಂದೇ ಸಮನಾದ ಸಂಬಳ ಸಾರಿಗೆ ಬರುವಹಾಗೆ ಮಾಡಬೇಕು. ಇದರಲ್ಲಿ ಮುಖ್ಯವಾಗಿ ಒಂದು ವಿಷಯವನ್ನು ಹೇಳಬೇಕಾಗಿದೆ. ಮೇಲಿನ ಅಧಿಕಾರಿಗಳ ಸಂಬಳವನ್ನು ಇನ್ನೂ ಕಡಮೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಆ ರೀತಿ ಮಾಡಲೇಬೇಕು. ಸಾಮಾನ್ಯವಾಗಿ ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ನೂರು ರೂಪಾಯಿಗಳಿಗೆ ಕಡಮೆಯಾಗಿ ಇರಬಾರದು ಎಂದು ಪೇಕಮಿಷ್ಣ ಅವರೂ ಕೂಡ ಹೇಳಿದ್ದಾರೆ. ಅಂದರೆ ಕಡಮೆ ಸಂಬಳ ಬರುವವರಿಗೂ, ಜಾಸ್ತಿ ಸಂಬಳ ಬರುವವರಿಗೂ ಅಂತರ ಜಾಸ್ತಿ ಇರಬಾರದು. ಅತ್ಯಂತ ಹೆಚ್ಚು ಸಂಬಳ ತೆಗೆದು ಕೊಳ್ಳುವವರಿಗೂ ಕಡಮೆ ತೆಗೆದುಕೊಳ್ಳುವವರಿಗೂ ಹತ್ತರಷ್ಟು ಅಂತರವಿರಬಹುದು. ಈಗ ಅಜಗಜಾಂತರ ವ್ಯತ್ಯಾಸವಿದೆ. ಇದೆಲ್ಲ ಹೋಗಬೇಕಾದರೆ ಅತಿ ಕಡಮೆ ಸಂಬಳವೆಂದರೂ ನೂರು ರೂಪಾಯಿಗಳು ಬರುವ ಹಾಗೆ ಮಾಡಬೇಕು. ಹಾಗೆ ಮಾಡಿದರೆಯೇ ನಮ್ಮ ಸರಕಾರದ ವಿಷಯದಲ್ಲಿ ನಾನ್‌ಗೆಜೆಟೆಡ್ ನೌಕರರಿಗೆ ಅಭಿಮಾನ ಉಂಟಾಗುತ್ತದೆ. ಇನ್ನೂ ಹೆಚ್ಚು ಕೆಲಸ ಸಮರ್ಪಕವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ನನಗೆ ಅಧಿಕೃತವಾಗಿ ಗೊತ್ತಿಲ್ಲದೆ ಹೋದರೂ ನನ್ನ ಕಿವಿಗೆ ಒಂದು ವಿಷಯಬಿದ್ದಿದೆ. ಇಂಡಿಯಾ ಸರ್ಕಾರದವರು ನೂರು ರೂಪಾಯಿಗಳಿಗಿಂತ ಕಡಮೆ ಸಂಬಳ ಬರತಕ್ಕವರ ತಲಬನ್ನು ಹೆಚ್ಚಿಸುವ ವಿಷಯದಲ್ಲಿ ಒಂದು ಗೊತ್ತಾದ ಪ್ರಮಾಣದಲ್ಲಿ ಹಣವನ್ನು ಕೊಡುವುದಕ್ಕೆ ಭರವಸೆ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಅದನ್ನು ನಾನು ಅಧಿಕಾರಯುತವಾಗಿ ಹೇಳುವುದಕ್ಕಾಗುವುದಿಲ್ಲ. ಸುಮಾರು 12 ರೂಪಾಯಿಗಳಿಂದ ಹಿಡಿದು ಹದಿನೈದು ರೂಪಾಯಿಗಳ ವರೆಗೂ ನೂರು ರೂಪಾಯಿಗಳಿಗೆ ಕಡಮೆ ಬರತಕ್ಕ ನೌಕರರ ಸಂಬಳವನ್ನು ಹೆಚ್ಚಿಸಲು ಸಹಾಯ ಮಾಡುತ್ತೇವೆಂಬುದಾಗಿ ಕೇಂದ್ರ ಸರ್ಕಾರದವರು ತಿಳಿಸಿದ್ದಾರೆಂದು ನನಗೆ ಸಮಾಚಾರ ಗೊತ್ತಾಗಿದೆ. ಅದನ್ನು ಸ್ಥಿರಪಡಿಸಿಕೊಳ್ಳತಕ್ಕದ್ದು ಮಂತ್ರಿಗಳ ಕೆಲಸ. ಆದರೆ ಸರಕಾರದವರ

(ಶ್ರೀ ಪಿ. ಆರ್. ರಾಮಯ್ಯ.)

12 ರೂಪಾಯಿಗಳಿಂದ 15 ರೂಪಾಯಿಗಳವರೆಗೆ ಮಾತ್ರ ಕೊಟ್ಟರೆ ಸಾಲುವುದಿಲ್ಲ. ಇನ್ನೂ ಜಾಸ್ತಿಯಾಗಿ ಕೊಡಬೇಕಾಗುತ್ತದೆ. ಈಗ ಬೇಕಾದಷ್ಟು ತೆರಿಗೆಗಳನ್ನು ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿ ಹಾಕಿದ್ದಾರೆ. ಇನ್ನೂ ಹಾಕುತ್ತಿದ್ದಾರೆ. New Taxation measure ನಲ್ಲಿ ತೆರಿಗೆಗಳನ್ನು ಯಾರು ಕೊಡುವುದಕ್ಕೆ ಸಮರ್ಥರಾಗಿದ್ದಾರೆಯೋ ಅವರಿಂದ ತೆಗೆದುಕೊಂಡು ಬಡ ನೌಕರರಿಗೆ ಸಹಾಯ ಮಾಡುವುದಕ್ಕೆ ಅವಕಾಶವಿದೆ. ಮತ್ತು ಹೆಚ್ಚು ಸಂಬಳ ತೆಗೆದುಕೊಳ್ಳತಕ್ಕವರಿಗೆ ಕಡಮೆ ಮಾಡುವುದಕ್ಕೆ ಅವಕಾಶವಿದೆ. ಈಗ ನೋಡಿ ಸ್ವಾಮಿ, 15-20 ರೂಪಾಯಿ ತೆಗೆದುಕೊಳ್ಳತಕ್ಕ ನೌಕರರು ಒಂದು ಕಡೆ, 1,800 ರೂಪಾಯಿ ಸಂಬಳ ತೆಗೆದುಕೊಳ್ಳುವ ಐ.ಎ.ಎಸ್. ಅಧಿಕಾರಿಗಳು ಒಂದುಕಡೆ. ಐ.ಎ.ಎಸ್-ಅಧಿಕಾರಿಗಳಿಗೆ ಸಂಬಳ ಜಾಸ್ತಿ ಬರುತ್ತದೆಂದು ನನಗೆ ಸಂಕಟವಿಲ್ಲ. ಕಡಮೆಬರುವ ನೌಕರರ ಸ್ಥಿತಿಯನ್ನು ಉತ್ತಮಪಡಿಸಬೇಕು.

ಇನ್ನೂ ಈ ವಿಷಯದಲ್ಲಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಒಂದು ವಿಷಯವನ್ನು ಮಾತ್ರ ಹೇಳಬೇಕಾಗಿದೆ. ಈಗ ಸ್ಕೇಲಗಳನ್ನು ವಿಂಗಡಿಸುವಾಗ ಸರ್ಕಾರದಲ್ಲಿ ಕೆಲಸ ಮಾಡುತ್ತಿರತಕ್ಕ ನೌಕರರಿಗೆ ಯಾವ ರೀತಿ ಅನುಕೂಲವಾಗುತ್ತದೆ ಎಂದು ನೋಡಿ ಅಂಥದ್ದರಲ್ಲಿ ಅವರನ್ನು ಸೇರಿಸಬೇಕು. ಈಗ ಸಾಮಾನ್ಯವಾಗಿ ಒಂದು ಸ್ಕೇಲು 80 ರೂಪಾಯಿ ವರೆಗೂ ಇದೆ. ಅದರಲ್ಲಿ ಒಬ್ಬಾತನು ಈಗ 75 ರೂಪಾಯಿ ತೆಗೆದುಕೊಳ್ಳುತ್ತಿದ್ದರೆ, ಅವನಿಗೆ ಹೆಚ್ಚಿನ ಸ್ಕೇಲನ್ನುಕೊಟ್ಟು ಆ ಸ್ಕೇಲಿನ ಫಲವನ್ನು ಪಡೆಯುವುದಕ್ಕೆ ಅವಕಾಶ ಕೊಡಬೇಕು. ಹೀಗೆ ಮಾಡದೆ ಕೆಳಗಿನ ಸ್ಕೇಲಿನಲ್ಲಿ ಎಂದರೆ 60, 75 ಇರುವ ಸ್ಕೇಲಿನಲ್ಲಿ ಹಾಕಿ, "ನಿನ್ನಸ್ಕೇಲು ಭರ್ತಿಯಾಯಿತು, ನೀನು ಮ್ಯಾಕ್ಸಿಮಂ ತಲುಪಿದ್ದಿ," ಎಂದರೆ ಅನ್ಯಾಯವಾಗುತ್ತದೆ. ನೌಕರರು ಯಾವ ಯಾವ ಸ್ಕೇಲುಗಳಲ್ಲಿ ಇರುತ್ತಾರೆಯೋ ಅದಕ್ಕಿಂತ ಉತ್ತಮವಾದ ಸ್ಕೇಲುಗಳನ್ನು ಅವರಿಗೆ ಕೊಟ್ಟು, service weightage ಮತ್ತು ಇನ್ಕ್ರಿಮೆಂಟುಗಳನ್ನು ಕೊಡಬೇಕು.

ಕಡೆಯದಾಗಿ ಒಂದು ಮಾತನ್ನು ಹೇಳಬೇಕಾಗಿದೆ. ನಾನ್‌ಗೆಜೆಟೆಡ್ ನೌಕರರ ಸಂಬಳ ಸಾರಿಗೆಗಳನ್ನು ಒಂದೇ, ರೀತಿ ಯೂನಿಫಾರಂ ಮಾಡುವುದಲ್ಲದೆ ಅವರುಗಳಿಗೆ ಇನ್ನೂ ಹೆಚ್ಚು ಅನುಕೂಲಗಳನ್ನು ವಿದ್ಯಾಭ್ಯಾಸದ ವಿಷಯದಲ್ಲಿ, ವೈದ್ಯಕೀಯ ಸೌಲಭ್ಯಗಳ ವಿಷಯದಲ್ಲಿ, ಮನೆಗಳ ವಿಷಯದಲ್ಲಿ, ಆದಷ್ಟು ಮಟ್ಟಿಗೆ ಮಾಡಿ ಕೊಡಬೇಕು.

ಕಡೆಯದಾಗಿ, ನಾನು ಈ ಸಭೆಯ ಮುಂದಿಟ್ಟಿರುವ ನಿರ್ಣಯಕ್ಕೆ ಎಲ್ಲ ಸದಸ್ಯರ ಬೆಂಬಲವೂ ಇದೆಎಂದು ತಿಳಿದಿದ್ದೇನೆ. ಸರ್ಕಾರದವರು ಈ ವಿಷಯದಲ್ಲಿ ಏನು ನಿರ್ಧಾರ ತೆಗೆದುಕೊಳ್ಳುತ್ತಾರೆ, ಏನು ಮಾಡುತ್ತಾರೆನ್ನುವುದನ್ನು ನಾನು ತಿಳಿದುಕೊಳ್ಳಲು ಬಹಳ ಕುತೂಹಲಿಯಾಗಿದ್ದೇನೆ ಮತ್ತು ಈ ಸಭೆಯಲ್ಲಿಲ್ಲದೆ ಇರತಕ್ಕ ಸಾವಿರಾರು ಜನ ನಾನ್‌ಗೆಜೆಟೆಡ್ ನೌಕರರೂ ಬಹಳ ಕಾತರರಾಗಿದ್ದಾರೆ. ಈ ಸಮಯದಲ್ಲಿ ಸರಕಾರದವರು ಸಂಬಳ ಸಾರಿಗೆಗಳನ್ನು uniformityಗೆ ತರುವುದಕ್ಕೆ ಪ್ರಯತ್ನಪಟ್ಟು, ಅದನ್ನು ಆದಷ್ಟು ಬೇಗ ತಂದರೆ ಸಾವಿರಾರು ನೌಕರರ ಕೃತಜ್ಞತೆಗೆ ಪಾತ್ರರಾಗುತ್ತಾರೆಂದು ತಿಳಿಸಿ, ನನ್ನ ನಿರ್ಣಯವನ್ನು ಈ ಸಭೆ ಸಹಾನುಭೂತಿಯಿಂದ ಪರಿಶೀಲಿಸಿ ಅದಕ್ಕೆ ಸಮ್ಮತಿ ಕೊಡಬೇಕೆಂದು ಪುನಃ ಪ್ರಾರ್ಥಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ಸದಸ್ಯರಲ್ಲೊಬ್ಬರಾದ ಶ್ರೀಮಾನ್ ಪಿ. ಆರ್. ರಾಮಯ್ಯನವರು ಬಹಳ ಉತ್ತಮವಾದ ನಿರ್ಣಯವನ್ನು ತಂದಿದ್ದಾರೆ. ಹೊಸ ಮೈಸೂರು ರಾಜ್ಯದಲ್ಲಿನ ನಾನ್ ಗೆಜೆಟೆಡ್ ನೌಕರರ ಸಂಬಳದ ಸ್ಕೇಲುಗಳು ಒಂದೇ ಸಮನಾಗಿರಬೇಕೆನ್ನುವ ವಿಷಯದಲ್ಲಿ ದೇಶದ ಜನತೆ ಅದನ್ನು ಕಾದು ನೋಡುತ್ತಿರುವಂಥ ಸನ್ನಿವೇಶ ಈಗ ಒದಗಿದೆ. ಈ ಮಹತ್ತರವಾದ ಪರಿಸ್ಥಿತಿಯನ್ನು ಎದುರಿಸುವಂಥ ಜವಾಬ್ದಾರಿ ಈಗ ಜನತೆಯ ಪರವಾಗಿ ಹೋರಾಟ ನಡೆಸಿ ಬಂದಿರುವಂಥ ಜವಾಬ್ದಾರಿ ಸರ್ಕಾರಕ್ಕೆ ಒಂದು ಸವಾಲಿನಂತೆ ಇದೆ. ಇದನ್ನು ಜನ ಕಾದುನೋಡುತ್ತ ಇದ್ದಾರೆ. ಆದರೆ ಸರಕಾರಕ್ಕೆ ಇರುವ ಕಷ್ಟವೇನೆಂಬುದನ್ನು ನಾವು ಅರಿತುಕೊಳ್ಳಬೇಕು. ಸರಕಾರ ತನ್ನ ನಿಲುವಿನ ಬಗ್ಗೆ ಜನತೆಗೆ ಏನು ಉತ್ತರ ನೀಡುತ್ತಿದೆಯೋ ಅದು ಅಷ್ಟು ತೃಪ್ತಿಕರವಾಗಿಲ್ಲವೆಂದು ಹೇಳುವವರಲ್ಲಿ ನಾನೂ ಒಬ್ಬ. ನಾನ್ ಗೆಜೆಟೆಡ್ ಅಧಿಕಾರಿಗಳು ದೇಶಕ್ಕೆ ಒಂದು ಅಡಿಪಾಯದಂತೆ ಇರುವವರು. ಒಂದು ಕಟ್ಟಡ ಅಥವಾ ಮನೆಯನ್ನು ಕಟ್ಟಬೇಕಾದರೆ ಆ ಕಟ್ಟಡದ ಪಾಯ ಎಷ್ಟು ಭದ್ರವಾಗಿ ಇರುತ್ತದೆಯೋ ಅಷ್ಟೇ ಭದ್ರವಾಗಿ ಅದರ ಮೇಲೆ ಕಟ್ಟುವ ಕಟ್ಟಡವೂ ಇರುತ್ತದೆ. ಅದೇ ರೀತಿ ದೇಶದ ಆಡಳಿತಕ್ಕೆ ಒಂದು ಅಡಿಪಾಯದಂತೆ ಇರುವ ನಾನ್‌ಗೆಜೆಟೆಡ್ ಅಧಿಕಾರಿಗಳ ಸ್ಥಿತಿಯನ್ನು ಉತ್ತಮಪಡಿಸಬೇಕು. ಅವರಸ್ಥಿತಿ ಉತ್ತಮಹೊಂದಿ ಅವರು ತೃಪ್ತಿಯಿಂದ ಕೆಲಸಮಾಡಿದರೆ ಸರ್ಕಾರದ ಆಡಳಿತ ಸುಗಮವಾಗಿ ನಡೆಯುವುದು. ದೇಶದಲ್ಲಿರುವ ಜನತೆಯ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಅಡಿಗಲ್ಲಿನಂತಿರುವ ನಾನ್‌ಗೆಜೆಟೆಡ್ ಅಧಿಕಾರಿಗಳ ಸಮಸ್ಯೆಯನ್ನು ತೀರ್ಮಾನ ಮಾಡಬೇಕು. ಇದನ್ನು ಇನ್ನೂಮಾಡದೆ ಇರುವುದು ಯಾವ ನ್ಯಾಯವೆಂದು ಯೋಚನೆಮಾಡಬೇಕು. ಈಗ ಜನವಾಣಿ ಜನತೆಯವಾಣಿ ಏನಿದೆ ಎಂಬುದನ್ನು ತಿಳಿಸುತ್ತೇನೆ. ಈಗ ಜನತೆ ಏನು ಕಷ್ಟಪಡುತ್ತಿದೆ, ಪ್ರಜಾಪ್ರಭುತ್ವ ಬಂದ ಮೇಲೂ ಸಾಮಾನ್ಯ ಜನತೆ ಎಷ್ಟು ಕಷ್ಟಪಡುತ್ತಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಅವರ ಕಷ್ಟಗಳ ಪರಿಹಾರವಾಗದೆ ಇರುವುದರಿಂದ ಬಹಳ ಮಟ್ಟಿಗೆ ಅವರುಗಳು ನಿರಾಶರಾಗುವಂಥ ಸನ್ನಿವೇಶ ಬಂದಿದೆ.

ಆದರೆ ಸರ್ಕಾರದವರು ಹಣ ಇಲ್ಲ ಎನ್ನುತ್ತಾರೆ. ಪರವಾಗಿಲ್ಲ ಅದನ್ನು ಯೋಚನೆ ಮಾಡೋಣ, ಈಗ ಶಾಸನ ಸಭಾಸದಸ್ಯರಿಗೆ 150 ರೂಪಾಯಿ ಸಂಬಳ ನಿರ್ಧರ ಮಾಡಿದ್ದೀರಿ, ಅದಕ್ಕೆ ಬದಲಾಗಿ 100 ರೂಪಾಯಿ ಕೊಡಿ, ಅಲೋಯನ್ಸ್ ಕಡಮೆ ಮಾಡಿ. ಈ ರೀತಿ ಉಳಿತಾಯವಾದದ್ದನ್ನು ಎನ್. ಜಿ. ಓ. ಗಳಿಗೆ ಕೊಡಿ. ಇವೊತ್ತು ನಮಗೆ ತಾವೂ ಕೂಡ ತುಂಬ ಶಾಂತಯುತರಾದ ಅಧ್ಯಕ್ಷರು ಅಪರೂಪವಾಗಿ ಸಿಕ್ಕಿದ್ದೀರಿ. ತಾವು ಅವರ ಕಷ್ಟಗಳನ್ನು ಮನಗಂಡಿದ್ದೀರಿ. ಸಚಿವರೂ ಕೂಡ ಎನ್. ಜಿ. ಓ. ಗಳ ವಿಷಯದಲ್ಲಿ ತುಂಬ ಸಹಾನುಭೂತಿಯುಳ್ಳ ಸಚಿವರೇ ಇದ್ದಾರೆ. ಅದು ನಮ್ಮ ಅದೃಷ್ಟ ಎಂದು ಹೇಳುತ್ತೇನೆ. ಕೆಲಸಗಾರರ ಕಷ್ಟ ಯಾವ ರೀತಿ ಇದೆ ಎನ್ನುವುದಕ್ಕೆ ಒಂದೇ ಒಂದ ಉದಾಹರಣೆ ಕೊಡುತ್ತೇನೆ. ಚಿನ್ನದ ಗಣಿಯಲ್ಲಿ 6,000 ಅಡಿ ಕೆಳಗೆ ಹೋಗಿ ಸಂಪತ್ತನ್ನು ತರುವವನಿಗೆ 2 ರೂಪಾಯಿ ಕೂಲಿ; ಅದೇ ಷರಾಯಿ ಜೋಬಿನೊಳಗೆ ಎರಡು ಕೈಗಳನ್ನು ಬಿಟ್ಟುಕೊಂಡು ಸೂಪರ್‌ವೈಸ್ (Supervise) ಮಾಡುವವನಿಗೆ 20 ರೂಪಾಯಿ ಕೂಲಿ. ಇದು ಯಾವ ನ್ಯಾಯ? ಪ್ರಪಂಚದಲ್ಲಿಯೇ ಹೆಚ್ಚು ಚಿನ್ನ ಉತ್ಪನ್ನ

ಮಾಡತಕ್ಕ ಕೋಲಾರದ ಚಿನ್ನದಗಣಿ ಸಮಸ್ಯೆ ನಮ್ಮ ಸರ್ಕಾರದ ಮುಂದೆ ಇದೆ. 6,000 ಅಡಿ ಕೆಳಗೆ ಹೋಗಿ ಪ್ರಾಣದ ಮೇಲಿನ ಆಸೆಬಿಟ್ಟು ಚಿನ್ನ ತೆಗೆಯಬೇಕು. ಅಂತಹವನಿಗೆ 2—$2\frac{1}{4}$ ರೂಪಾಯಿ ಕೂಲಿ, ಮೇಲೆ ನಿಂತುಕೊಂಡು ಸೂಪರ್‌ವೈಜ್ ಮಾಡುವವನಿಗೆ 25 ರೂಪಾಯಿ ಕೂಲಿ ಎಂದರೆ ಯಾವ ಜನತೆ ತಾನೆ ಇದನ್ನು ಸಹಿಸೀತು? ಕಾರ್ಮಿಕಗಲ್ಲೂ ಕೂಡ ಇವೊತ್ತು ಒಗ್ಗಟ್ಟು ಇದೆ. ಸತ್ಯಾಗ್ರಹ ಹೂಡುವುದಕ್ಕೆ ಅವಕಾಶವಿದೆ. ಅದೇ ಬಡ ಉಪಾಧ್ಯಾಯರು, ಕಾನ್‌ಸ್ಟೇಬಲ್‌ಗಳು ಬಡ ಎನ್. ಜಿ. ಓ.ಗಳ ಗತಿ ಏನು? ಅವರ ಪರವಾಗಿ ಸರ್ಕಾರದ ಮೇಲೆ ಜನಗಳ ಒತ್ತಾಯ ಇದೆ. ನಿಜವಾಗಿಯೂ ಎನ್. ಜಿ. ಓ.ಗಳಿಗೆ ಅನುಕೂಲ ವಾತಾವರಣ ಕಲ್ಪಿಸ ಬಹುದೆಂದು ಜನತೆ ನೋಡುತ್ತ ಇದೆ. ದೇಶದಲ್ಲಿರತಕ್ಕ ಮೂರು ಲಕ್ಷ ಜನ ಎನ್. ಜಿ. ಓ.ಗಳು ಸತ್ಯಾಗ್ರಹ ಪ್ರಾರಂಭಿಸಿದರೆ ಬಹಳ ಕಷ್ಟವಾಗುತ್ತದೆ.

ಸ್ವಾಮಿ, ಈಗ ಐ. ಎ. ಎಸ್., ಐ.ಪಿ. ಎಸ್. ಎಂದು ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಏಕೆ ಸ್ವಾಮಿ; ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎನ್ನುವ ಹಾಗೆ ಮಾಡುತ್ತಾ ಇದ್ದೀರಿ? ನಮ್ಮವರು ಅವರಿಗಿಂತ ಏನು ಕಡಮೆ, ಸ್ವಾಮಿ ಅವರಿಗೆ 1,000 ರೂಪಾಯಿ ಸಂಬಳ, ಇವರಿಗೆ 300 ರೂಪಾಯಿ ಸಂಬಳ, ಇದು ನ್ಯಾಯವೇ? ಅವರಿಗೆ ಇರುವ ಸ್ಪೆಷಲ್ ಕ್ವಾಲಿಫಿಕೇಷನ್ ಆದರೂ ಏನು ಎಂದು ಕೇಳುತ್ತೇನೆ. ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳು ಮಾಡುವ ಕೆಲಸ ಬೇರೆಯವರು ಮಾಡುವುದಿಲ್ಲವೇ? ಅವರು ಇವರಿಗಿಂತ ಹೆಚ್ಚಿನ ಸೇವೆ ಏನುಮಾಡುತ್ತಾರೆ? ಯಾವ ಗಲಾಟೆ ಆಗಲೀ, ಮೊದಲು ಬರುವವನು ಎಂದರೆ ಪೋಲೀಸ್ ಕಾನ್‌ಸ್ಟೇಬಲ್ಲೇ! ಐ. ಪಿ. ಎಸ್. ಆಫೀಸರು ಬರುವುದಿಲ್ಲ. ಕೆಟ್ಟದ್ದಾಗಲೀ, ಒಳ್ಳೆಯದಾಗಲೀ ಪೋಲೀಸ್ ಕಾನ್‌ಸ್ಟೇಬಲ್ ಬರಬೇಕು. ಗಲಾಟೆಯಲ್ಲಿ ಏಟು ತಿಂದು ಪ್ರಾಣ ಒಪ್ಪಿಸಬೇಕು. ಅವರ ಪ್ರಾಣ ಉಳಿಸಿಕೊಡುವವರು ಯಾರೂ ಇಲ್ಲ. ಇದನ್ನು ತಾವೇ ಯೋಚನೆ ಮಾಡಿ ಹೇಳಿ ಸ್ವಾಮಿ. ಈಗಿನ ಪ್ರಜಾಪ್ರಭುತ್ವದಲ್ಲಿ ಈ ರೀತಿ ಅಸಮಾನತೆಯನ್ನು ಹೆಚ್ಚಿಸಿಕೊಂಡು ಹೋಗುತ್ತ ಬಂದರೆ ಸರ್ಕಾರದ ವಿಷಯದಲ್ಲಿ ಜನತೆ ಏನೆನ್ನುತ್ತಾರೆ? ಈಗ ನೋಡಿ ಜನ ಬ್ರಿಟಿಷರಕಾಲವೇ ಚೆನ್ನಾಗಿತ್ತು ಎಂದು ಎನ್ನುತ್ತ ಇದ್ದಾರೆ. ಅದನ್ನು ಕೇಳಿಕೊಂಡು ಸರ್ಕಾರ ಸುಮ್ಮನಿದ್ದರೆ ಅದು ಅಪರಾಧವಾಗುತ್ತದೆ ಎಂದು ನಾನು ಈ ಸಭೆಯ ಮುಂದೆ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರೆಲ್ಲರೂ ಈ ವಿಷಯದಲ್ಲಿ ಅನೇಕ ಪ್ರಶ್ನೆಗಳನ್ನು ಹಾಕಿದ್ದಾರೆ. ಬೊಂಬಾಯಿ ಸ್ಕೇಲನ್ನು ಕೊಟ್ಟರೆ 7 ಕೋಟಿ ರೂಪಾಯಿಗಳು ಬೇಕಾಗುತ್ತವೆ ಎಂದು ಹೇಳುತ್ತೀರಿ. ತಾವೇ ಹೇಳಿ ನನ್ನ ಪಕ್ಕದಲ್ಲಿ ಕುಳಿತು ಕೊಂಡು ನಾನು ಮಾಡುವ ಕೆಲಸವನ್ನೇ ಮಾಡುವವನಿಗೆ 500 ರೂಪಾಯಿ ಸಂಬಳ, ನನಗೆ 100 ರೂಪಾಯಿ ಸಂಬಳ ಎಂದರೆ ಯಾವ ರೀತಿಯಲ್ಲಿ ತಾನೆ ಸಮಾಧಾನ ಇರುತ್ತದೆ. ಜನತೆಯಕೂಗು ಏನಿದೆ ಎಂಬುದನ್ನು ಹೇಳುತ್ತಾ ಇದ್ದೇನೆ. ಆದ್ದರಿಂದ ನಾನು ಇದಕ್ಕೆ ಒಂದು ಪರಿಹಾರೋಪಾಯವನ್ನು ಹೇಳಬೇಕೆಂದರೆ 7 ಕೋಟಿ ರೂಪಾಯಿ ಬೇಕಾಗುತ್ತವೆ ಎಂದು ಹೇಳುತ್ತ ಇದ್ದೀರಿ. 7 ಕೋಟಿ ರೂಪಾಯಿ ಕೊಡುವುದಕ್ಕೆ ಸಾಲದೆ ಹೋದರೆ ಪ್ರಯತ್ನಪಡಿ. ಎರಡನೆಯ ಪಂಚ ವಾರ್ಷಿಕ ಯೋಜನೆ ಬೇರೆ ಇದೆ. ಅಮೇರಿಕಾ ದೇಶದವರಿಗೆ ಭಾರತೀಯರು ಹಣಬೇಕು ಎಂದು ಬರೆದರೆ ಸಾಕು ಕಳುಹಿಸುತ್ತಾರೆ. ಕೊಡದೇ ಇರುವುದಿಲ್ಲ. ಇಂಡಿಯಾ ದೇಶದ ಕಡೆಗೆ ರಷ್ಯಾದವರು ನೋಡುತ್ತ ಇದ್ದಾರೆ. ಚೈನಾ ದೇಶದವರೂ ನೋಡುತ್ತ ಇದ್ದಾರೆ. ನಮ್ಮ ಕಷ್ಟ ಏನು ಎಂಬುದು ಗೊತ್ತಾದರೆ ನಮ್ಮ ಜನತೆಗೆ ಅವರು ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಕಷ್ಟ, ಕಷ್ಟ ಎಂದರೆ ಯಾವಾಗಲೂ ಕಷ್ಟವೇ. ನಿಮ್ಮ ಉತ್ತರ ಯಾರಿಗೂ ಸಮಾಧಾನಕರವಾಗಿಲ್ಲ. ಇದರಿಂದ ನಿಜವಾಗಿಯೂ ಎನ್. ಜಿ. ಓ. ಗಳನ್ನು ಇನ್ನಷ್ಟು ಉದ್ರೇಕಪಡಿಸಿದ್ದೀರಿ. ದೇಶದಲ್ಲಿ ಜನತೆ ಪಡುತ್ತಿರತಕ್ಕ ಕಷ್ಟನೋಡಿದರೆ ಸರ್ಕಾರಕ್ಕೆ ಬಹಳ ಕಷ್ಟ ನಷ್ಟವುಂಟಾಗುತ್ತದೆ. ನೀವು ಸ್ವಲ್ಪ ಎಚ್ಚರಿಕೆಯಿಂದ ಇರಬೇಕು ಎಂದು ಹೇಳುತ್ತಿದ್ದೇನೆ ಮನುಷ್ಯ ಷಿಕಾರಿಗೋಸ್ಕರ ಹೋಗಿ ಹುಲಿಯನ್ನು ಕೊಂದರೆ ಪರವಾಗಿಲ್ಲ. ಅದೇ ಮನುಷ್ಯನ ಮೇಲೆಬಿದ್ದರೆ ಅಯ್ಯೋ, ಪಾಪ ಅಂದಹಾಗೆ ಸರ್ಕಾರ ಏನುಮಾಡಿದರೂ ಪರವಾಗಿಲ್ಲ, ಜನತೆ ಮಾತ್ರ ಸುಮ್ಮನಿರಬೇಕು. ವಿಶಾಲ ಕರ್ಣಾಟಕ ಆಗಬೇಕು ಎನ್ನುತ್ತಾರೆ. ದುಡ್ಡು ಇಲ್ಲ ಎನ್ನುತ್ತಾರೆ. ದುಡ್ಡು ಇಲ್ಲದೇ ಇದ್ದರೆ ಏಕೆ ಮಾಡಬೇಕಾಗಿತ್ತು? ದೇಶ ದೊಡ್ಡದಾದ ಮೇಲೆ ಆದಾಯವೂ ತಕ್ಕಷ್ಟು ಇದ್ದೇ ಇರುತ್ತದೆ. ಜನತೆ ಕಾದು ನೋಡುತ್ತಿದೆ, ಯಾರು ಯಾವ ಭಾಷಣದಲ್ಲಿ ಏನು ಹೇಳುತ್ತಾರೆ ಸರ್ಕಾರದ ಕಾರ್ಯನೀತಿ ಏನು ಎಂಬುದನ್ನು ನಿರೀಕ್ಷೆ ಮಾಡುತ್ತಾ ಇದೆ. ತಾವು ಏನೂ ಪ್ರಯತ್ನ ಮಾಡದೆ 7 ಕೋಟಿ ರೂಪಾಯಿ ಇಲ್ಲ ಎಂದು ಹೇಳುತ್ತೀರಿ. ಪ್ರಯತ್ನಮಾಡಿ ಏಕೆ ಇಲ್ಲ ನೋಡುತ್ತೇನೆ. ನಾವೆಲ್ಲ ಹೋಗೋಣ, ನೆಹರು ಅವರಿಗೆ ಹೇಳೋಣ. 7 ಕೋಟಿ ರೂಪಾಯಿಗಳು ಏಕೆ ಎಂದರೆ, ವಿಶಾಲ ಮೈಸೂರು ಆಗಿ, ಹೊರಗಡೆಯಿಂದ ಬಂದು ಮೈಸೂರಿನವರ ಪಕ್ಕದಲ್ಲಿ ಕುಳಿತು ಕೆಲಸಮಾಡುವವರಿಗೆ 500 ರೂಪಾಯಿ ಸಂಬಳ, ಮೈಸೂರಿನವರಿಗೆ 100 ರೂಪಾಯಿ ಸಂಬಳ ಈ ಪರಿಸ್ಥಿತಿಯನ್ನು ಎದುರಿಸುವುದು ಬಹಳ ಕಷ್ಟವಾಗಿದೆ ಎಂದು ಹೇಳೋಣ. ಅವರೇಕೆ ಸಹಾಯ ಮಾಡುವುದಿಲ್ಲ ಎಂದು ಹೇಳುತ್ತಾರೆ, ನೋಡೋಣ. ಈಗ ನಮ್ಮಲ್ಲಿ ವಾಚ್ ಅಂಡ್‌ವಾರ್ಡ್ ಇದೆ. ಅವರಿಗೆ ಒಂದು ದಿವಸಕ್ಕೆ 14 ಆಣೆ ಕೊಡುತ್ತಿದ್ದೀರಿ. ಈಗ ಏಕ್‌ದಂ 10 ಆಣೆ ಮಾಡಿದ್ದೀರಿ. ಏಕೆ ಸ್ವಾಮಿ ಏನು ಈ ಅನ್ಯಾಯ? 14 ಆಣೆ ಕೊಟ್ಟಿದ್ದನ್ನು 10 ಆಣೆ ಮಾಡಿದರೆ ಬಡವರಿಗೆ ಬಡತನ ಜಾಸ್ತಿ ಆಯಿತು, ಶ್ರೀಮಂತರಿಗೆ ಸಿರಿತನ ಜಾಸ್ತಿ ಆಯಿತು ಅಷ್ಟೆ. ಈ ರೀತಿಯಾಗಿ ಮಾಡುತ್ತಿರುವುದರಿಂದ ಜನತೆಯಲ್ಲಿ ಅಶಾಂತಿ ಮೂಡುವುದಕ್ಕೆ ಅವಕಾಶವಾಗಿದೆ. ಎನ್. ಜಿ. ಓ.ಗಳ ಸಮಸ್ಯೆ ಮಹತ್ತರವಾದ ಸಮಸ್ಯೆಯಾಗಿದೆ. ಇದು ಪರಿಹಾರವಾಗದಿದ್ದರೆ ದೇಶದಲ್ಲಿ ಖಂಡಿತವಾಗಿಯೂ ಶಾಂತಿ ಇಲ್ಲದೆ ಕ್ರಾಂತಿಯುಂಟಾಗುತ್ತದೆ ಎಂದು ಹೇಳಿ ಎರಡು ನಿಮಿಷ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಭಾಷಣ ವನ್ನು ಮುಕ್ತಾಯಮಾಡುತ್ತೇನೆ.

'ಜೈ ಹಿಂದ್'

ಶ್ರೀ ಎನ್. ಬಿ. ಪೂಜಾರ್ (ರೋಣ್).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀಮಾನ್ ಪಿ. ಆರ್. ರಾಮಯ್ಯ ಅವರು ಮಂಡಿಸಿದ ಗೊತ್ತುವಳಿ ಮತ್ತೆ ಅವರು ವ್ಯಕ್ತಪಡಿಸಿರುವ ಮನೋಭಿಪ್ರಾಯಗಳಿಗೆ ನನ್ನ ಸಹಮತಿ ಇದ್ದು ಅವರ ಗೊತ್ತುವಳಿಯು ಪೂರ್ಣತೆಯನ್ನು ಮುಟ್ಟಬೇಕಾದರೆ ಈ ತಿದ್ದುಪಡಿಯು ಅವಶ್ಯಕತೆ ಇದೆ ಎಂದು ನನಗನಿಸುತ್ತದೆ. ಈ ತಿದ್ದುಪಡಿಯ ಉದ್ದೇಶ ಹೀಗಿದೆ: ಈಗಾಗಲೇ ಜಾರಿಯಲ್ಲಿರುವ

(ಶ್ರೀ ಎನ್. ಬಿ. ಪೂಜಾರ್.)

